

# ಶತಾಯುಷಿ ಅಜ್ಜಿಗೆ ಕೋಡು!

ಚೀನಾದ ಹೆನನ್ ಪ್ರಾವಿನ್ಸ್‌ನ ಬಳಿ ಇರುವ ಲಿನ್ ಲೌ ಹಳ್ಳಿಯಲ್ಲಿರುವ ಝಾಂಗ್ ರೂಫಾಂಗ್‌ಗೆ 101 ವರ್ಷ ವಯಸ್ಸು. ಆರು ಮಕ್ಕಳ ತಾಯಿಯೂ ಆಗಿರುವ ಈ ಶತಾಯುಷಿಗೆ ಹಣೆಯಲ್ಲಿ ಕೋಡು ಮೂಡಿದ್ದು, ಆಕೆಯ ಬಂಧು ಬಳಗದವರಿಗೆಲ್ಲಾ ಬೆರಗನ್ನುಂಟು ಮಾಡಿದೆ.

ಈ ಅಜ್ಜಿಯ ಕಿರಿಮಗ 60 ವರ್ಷದ ಝಾಂಗ್ ಗೌರ್‍ಝುಂಗ್ ಹೇಳಿರುವ ಪ್ರಕಾರ, ‘ಮೊದಲು ಹಣೆಯಲ್ಲಿದ್ದ ಚರ್ಮ ಒರಟಾಗಿತ್ತು. ನಾವು ಅದರ ಬಗ್ಗೆ ಅಷ್ಟಾಗಿ ಗಮನ ಕೊಡಲಿಲ್ಲ. ನಂತರ ಅದು ಬೆಳೆಯಲು ಆರಂಭಿಸಿತು!’ ಸದ್ಯಕ್ಕೆ ಕೊಂಬು ಆರು ಸೆಂ.ಮೀ. ನಷ್ಟು ಉದ್ದವಾಗಿದೆಯಂತೆ. ಇನ್ನೂ ಅಚ್ಚರಿಯ ವಿಷಯವೇನೆಂದರೆ ಈ ಅಜ್ಜಿ ಹಣೆಯ ಇನ್ನೊಂದು ಪಕ್ಕದಲ್ಲಿ ಮತ್ತೊಂದು ಕೊಂಬು ಚಿಗುರುವ ಲಕ್ಷಣಗಳು ಗೋಚರಿಸುತ್ತಿದೆಯಂತೆ!

■ ವಿದ್ಯಾ ಹಾಲಭಾವಿ



